# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 2114* |
| ಸದಸ್ಯರ ಹೆಸರು: | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸಬೇಕಾದ ದಿನಾಂಕ: | 25.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಕದ್ರಿ ಶ್ರೀ ಮಂಜುನಾಥ, ಶ್ರೀ ಮಂಗಳೂರು ಮಂಗಳಾ ದೇವಿ, ಕೊಲ್ಲೂರು ಶ್ರೀ ಮೂಕಾಂಬಿಕಾ ಈ ನಾಲ್ಕು ದೇವಾಲಯಗಳ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಗಳೇನು; ಈ ದೇವಸ್ಥಾನಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಅದನ್ನು ಯಾವಾಗ ಜಾರಿಗೆ ತರಲಾಗುವುದು; | 1. ಕರ್ನಾಟಕ ಸರ್ಕಾರ, ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ ಅಧಿಕೃತ ವೆಬ್ ಸೈಟ್ https://itms.kar.nic.in ನಲ್ಲಿ ರಾಜ್ಯದ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳ ಇತಿಹಾಸದ ಕುರಿತು ಅಧಿಕೃತ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿದ್ದು, https://itms.kar.nic.in ನಲ್ಲಿ ಲಭ್ಯವಿರುವಂತೆ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಕದ್ರಿ ಶ್ರೀ ಮಂಜುನಾಥ, ಶ್ರೀ ಮಂಗಳೂರು ಮಂಗಳಾ ದೇವಿ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿ ದೇವಸ್ಥಾನ ಈ ನಾಲ್ಕು ದೇವಾಲಯಗಳ ಲಭ್ಯ ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ.<br><br>2. 2026-27ನೇ ಸಾಲಿನ ಆಯ-ವ್ಯಯ ಘೋಷಣೆ ಕಂಡಿಕೆ ಸಂಖ್ಯೆ:443ರಲ್ಲಿ 'ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯ' ಮತ್ತು 'ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯ'ಗಳಿಗೆ ಮೂಲಭೂತ ಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ಉದ್ದೇಶಿಸಲಾಗಿದೆ.<br><br>ಸದರಿ ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರದ ರಚನೆ ಕುರಿತು ಕರಡು ಅಧಿನಿಯಮವನ್ನು ಸಿದ್ಧಪಡಿಸಲಾಗುತ್ತಿದೆ.<br>3. ಕದ್ರಿ ಶ್ರೀ ಮಂಜುನಾಥ ಮತ್ತು ಶ್ರೀ ಮಂಗಳೂರು ಮಂಗಳಾ ದೇವಿ ದೇವಸ್ಥಾನಗಳಿಗೆ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ದೇವಾಲಯಗಳಿಗೆ ವಾರ್ಷಿಕವಾಗಿ ಸರ್ಕಾರದಿಂದ ನೀಡಲಾಗುವ ಅನುದಾನವೆಷ್ಟು; ದೇವಸ್ಥಾನಗಳ ಆದಾಯ, ವೆಚ್ಚ ಹಾಗೂ ಬ್ಯಾಂಕು ಠೇವಣಿ ಮೊತ್ತವೆಷ್ಟು; ಠೇವಣಿ ಮೊತ್ತದ ಮೇಲೆ ಸಂಗ್ರಹಿಸಲಾದ ಬಡ್ಡಿ ಮೊತ್ತವನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ; ಅದರ ನಿಯಮಾವಳಿಗಳೇನು; ದೇವಸ್ಥಾನಗಳಿಂದ ಧಾರ್ಮಿಕ ದತ್ತಿ ಸಾಮಾನ್ಯ ನಿಧಿಗೆ ಎಷ್ಟು ಮೊತ್ತ ವರ್ಗಾವಣೆ ಮಾಡಲಾಗಿದೆ; | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಕದ್ರಿ ಶ್ರೀ ಮಂಜುನಾಥ, ಶ್ರೀ ಮಂಗಳೂರು ಮಂಗಳಾ ದೇವಿ, ಕೊಲ್ಲೂರು ಶ್ರೀ ಮೂಕಾಂಬಿಕಾ ಈ ನಾಲ್ಕು ದೇವಾಲಯಗಳಿಗೆ ಸರ್ಕಾರದಿಂದ ಅನುದಾನವನ್ನು ನೀಡಲಾಗಿರುವುದಿಲ್ಲ.<br>ಸದರಿ ದೇವಸ್ಥಾನಗಳ ಆದಾಯ, ವೆಚ್ಚ ಹಾಗೂ ಬ್ಯಾಂಕು ಠೇವಣಿ ಮೊತ್ತದ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>ಸದರಿ ದೇವಾಲಯಗಳ ನಿಶ್ಚಿತ ಠೇವಣಿ ಮೊತ್ತದ ಮೇಲೆ ಸಂಗ್ರಹಿಸಲಾದ ಬಡ್ಡಿ ಮೊತ್ತವನ್ನು ಮರುಹೂಡಿಕೆ ಮಾಡಲಾಗುವುದು ಮತ್ತು ಅಭಿವೃದ್ಧಿ ಕಾಮಗಾರಿ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 36ರ ಅನ್ವಯ ಮಂಜೂರಾದ ಮುಂಗಡ ಪತ್ರದ ಪ್ರಕಾರ ಬಳಸಲಾಗುತ್ತದೆ.<br>ಈ ನಾಲ್ಕು ದೇವಸ್ಥಾನಗಳಿಂದ ನಿವ್ವಳ ಆದಾಯದ ಶೇ.10% ಮೊತ್ತವನ್ನು ಕಾಯ್ದೆಯ ಕಲಂ 17(ಎ) ರಂತೆ ಧಾರ್ಮಿಕ ದತ್ತಿ ಇಲಾಖೆಯ ಸಾಮಾನ್ಯ ಸಂಗ್ರಹಣಾ ನಿಧಿಗೆ ವಂತಿಗೆಯನ್ನು ಪಾವತಿಸಲಾಗಿರುವ ಮೊತ್ತದ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>**ದೇವಾಲಯಕ್ಕೆ ಬರುವ ಯಾವುದೇ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡುವುದಿಲ್ಲ.**<br><br>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 17 ರನ್ವಯ ವಾರ್ಷಿಕ ಆದಾಯವು ರೂ.10.00 ಲಕ್ಷಗಳನ್ನು ಮೀರುವ ಸಂಸ್ಥೆಗಳಿಂದ ನಿವ್ವಳ ಆದಾಯದ ಶೇ.10 ರಷ್ಟು ಮೊತ್ತವನ್ನು ಹಾಗೂ ವಾರ್ಷಿಕ ಆದಾಯವು ರೂ.5.00 ಲಕ್ಷಗಳನ್ನು ಮೀರಿದ್ದು, ಆದರೆ ರೂ.10.00 ಲಕ್ಷಗಳನ್ನು ಮೀರಿರದ ಸಂಸ್ಥೆಗಳ ನಿವ್ವಳ ಆದಾಯದ ಶೇ.5 ರಷ್ಟು ವಂತಿಗೆ ಮೊತ್ತವನ್ನು ಸಾಮಾನ್ಯ ಸಂಗ್ರಹಣ ನಿಧಿಗೆ ಜಮೆ ಮಾಡಬೇಕಾಗಿರುತ್ತದೆ.<br>ಈ ರೀತಿ ಸಂಗ್ರಹವಾದ ವಂತಿಗೆ ಮೊತ್ತವನ್ನು ಇಲಾಖಾ ಅಧಿನಿಯಮ ಕಲಂ 19 (1) (ಎ) ರನ್ವಯ ಸಂದಾಯವಾದ ಹಣವನ್ನು ಹಿಂದೂ ದೇವಸ್ಥಾನಗಳಿಗೆ ಬಿಡುಗಡೆ ಮಾಡಲು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಅವಕಾಶವಿದ್ದು, ಅದರಂತೆ ಕಳೆದ ಮೂರು (3) ವರ್ಷಗಳಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿರುವ ವಿವರ ಈ ಕೆಳಕಂಡಂತಿದೆ.<br><br>**ಕ್ರ. ಸಂ** / **ಆರ್ಥಿಕ ವರ್ಷ** / **ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)**<br>1. / 2022-23 / 99.00<br>2. / 2023-24 / 17.50<br>3. / 2024-25 / 75.00<br>**ಒಟ್ಟು** / **191.50**<br><br>ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಹುಂಡಿಯಿಂದ ಮತ್ತು ಇತರೆ ಮೂಲಗಳಿಂದ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತದೆ.<br><br>ಬೆಂಗಳೂರು ನಗರದ ಕೆ.ಆರ್.ವೃತ್ತದಲ್ಲಿರುವ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಸಾಮಾನ್ಯ ಸಂಗ್ರಹಣ ನಿಧಿಯಿಂದ ರೂ.27.70ಕೋಟಿಗಳ ಅಂದಾಜು ವೆಚ್ಚದಲ್ಲಿ ಧಾರ್ಮಿಕ ಸೌಧ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲ ಹಂತದಲ್ಲಿ **ರೂ.9.00 ಕೋಟಿಗಳನ್ನು** ಬಿಡುಗಡೆ ಮಾಡಲಾಗಿದೆ.<br><br>ಆಂಧ್ರಪ್ರದೇಶದ ತಿರುಪತಿ ಗಾಂಧಿ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಖಾಲಿ ನಿವೇಶನದಲ್ಲಿ ರೂ.17.10 ಕೋಟಿಗಳ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣವನ್ನು ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.<br><br>ತಿರುಪತಿಯ ತಿರುಚನೂರಿನಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಕಲ್ಯಾಣ ಮಂಟಪದ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಹೊರರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ ರೂ.3.90 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಅಭಿವೃದ್ಧಿ ಮೊದಲನೇ ಹಂತದ ಕಾಮಗಾರಿಯನ್ನು ರೂ.9.98 ಕೋಟಿಗಳ ವೆಚ್ಚದಲ್ಲಿ ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>'ಎ' ಮತ್ತು 'ಬಿ' ವರ್ಗದ ಧಾರ್ಮಿಕ ಸಂಸ್ಥೆಗಳಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 25ರನ್ವಯ ಸ್ಥಳೀಯರನ್ನೊಳಗೊಂಡಂತೆ 09 ಜನ ಸದಸ್ಯರ ವ್ಯವಸ್ಥಾಪನಾ ಸಮಿತಿ ರಚಿಸಲಾಗುತ್ತದೆ. ಸದರಿ ಸಮಿತಿಯು ದೇವಾಲಯದ ವಾರ್ಷಿಕ ಆಯವ್ಯಯ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವುದು ಇತ್ಯಾದಿಗಳ ಕುರಿತಂತೆ ಚರ್ಚಿಸಿ ನಿರ್ಣಯ ಕೈಗೊಳ್ಳುತ್ತದೆ. |
| ಇ) | ಹೆಚ್ಚು ಆದಾಯ ಹೊಂದಿರುವ 'ಎ' ಗ್ರೇಡ್ ದೇವಸ್ಥಾನಗಳ ಆದಾಯವನ್ನು ಅದೇ ವ್ಯಾಪ್ತಿಯ ಕಡಿಮೆ ಆದಾಯದ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರ ಸಂಬಳ ಹಾಗೂ ಪೂಜಾ ಸಾಮಗ್ರಿಗಳ ಖರೀದಿಗೆ ಬಳಸುವ ಅವಕಾಶವಿದೆಯೇ; ಇಲ್ಲದಿದ್ದರೆ, ಈ ದೇವಸ್ಥಾನಗಳಿಗೆ ವಿಶೇಷ ಅನುದಾನ ನೀಡುವ ಬಗ್ಗೆ ಚಿಂತನೆ ಇದೆಯೇ; | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997, ಮತ್ತು ನಿಯಮಗಳು 2002ರಡಿಯಲ್ಲಿ ಹೆಚ್ಚು ಆದಾಯ ಹೊಂದಿರುವ 'ಎ' ಗ್ರೇಡ್ ದೇವಸ್ಥಾನಗಳ ಆದಾಯವನ್ನು ಅದೇ ವ್ಯಾಪ್ತಿಯ ಕಡಿಮೆ ಆದಾಯದ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರ ಸಂಬಳ ಹಾಗೂ ಪೂಜಾ ಸಾಮಗ್ರಿಗಳ ಖರೀದಿಗೆ ಬಳಸಲು ಅವಕಾಶವಿರುವುದಿಲ್ಲ.<br>ಪ್ರಸ್ತುತ ರಾಜ್ಯದ "ಸಿ" ವರ್ಗದ ದೇವಾಲಯಗಳಲ್ಲಿ ಪೂಜಾಕೈಂಕರ್ಯಗಳ ನಿರ್ವಹಣೆಗಾಗಿ ಸರ್ಕಾರವು ತಸ್ತೀಕ್ ಭತ್ಯೆಯನ್ನು ನೀಡುತ್ತಿದ್ದು ಈ ಭತ್ಯೆಯನ್ನು ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿದ್ದು ಪ್ರಸ್ತುತ 2025-26ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ.65.ಮುಅಬಿ.2025, ದಿನಾಂಕ: 22-04-2025 ರನ್ವಯ ವಾರ್ಷಿಕ ರೂ.72,000-00ಗಳ ತಸ್ತೀಕ್ ನೀಡಲಾಗುತ್ತಿದೆ.<br>ಅದೇ ರೀತಿ ರಾಜ್ಯದಲ್ಲಿನ ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ನಾನ್ ಇನಾಂ ಜಮೀನುಗಳು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರನ್ವಯ ಸರ್ಕಾರದಲ್ಲಿ ವಿಹಿತ ವಾಗಿರುವುದಕ್ಕೆ ಪರಿಹಾರಾರ್ಥವಾಗಿ 2025-26ನೇ ಸಾಲಿನಿಂದ ಜಾರಿಗೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಬರುವಂತೆ ಸರ್ಕಾರದ ಆದೇಶ ಸಂಖ್ಯೆ:ಕಂಇ.36.ಮುಅಬಿ.2025 ದಿನಾಂಕ: 20-08-2025 ರನ್ವಯ ರೂ.72,000ಗಳ ವರ್ಷಾಸನ ಮೊತ್ತವನ್ನು ನೀಡಲಾಗುತ್ತಿದೆ.<br>ಆದರೆ, ಕಡಿಮೆ ಆದಾಯದ 'ಸಿ' ದರ್ಜೆ ದೇವಸ್ಥಾನಗಳ ಜೀರ್ಣೋದ್ಧಾರ, ಸಂಸ್ಥೆಯಲ್ಲಿ ಸಾಕಷ್ಟು ಹಣ ಇಲ್ಲದಿರುವಾಗ ಅರ್ಚಕರಿಗೆ ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನಗಳ ಸಂದಾಯ ಮುಂತಾದವುಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ, ಸಾಮಾನ್ಯ ಸಂಗ್ರಹಣಾ ನಿಧಿಯ ಆದಾಯದ ಲಭ್ಯತೆಗೆ ಅನುಗುಣವಾಗಿ ನಿಯಮಾನುಸಾರ ಸೂಕ್ತ ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗುತ್ತದೆ.<br>ಮುಂದುವರೆದು, ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ 'ಸಿ' ವರ್ಗದ ದೇವಾಲಯಗಳ ಅರ್ಚಕರಿಗೆ ಮತ್ತು ದೇವಾಲಯಗಳ ನೌಕರರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ.<br><br>i. ಅಧಿಸೂಚಿತ "ಸಿ" ದೇವಾಲಯದ ಸಿಬ್ಬಂದಿ/ ನೌಕರರು ಮರಣ ಹೊಂದಿದಲ್ಲಿ ಅವರ ಕುಟುಂಬದ ವಾರಸುದಾರರಿಗೆ ರೂ.2.00 ಲಕ್ಷಗಳ ಮರಣಾಂತ ಪರಿಹಾರ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ನೀಡಲಾಗುತ್ತಿದೆ.<br><br>ii. ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ: ಎಡಿಎಂ1/832/2023- E-1218664, ದಿನಾಂಕ-27.10.2023ರನ್ವಯ ಈ ಕೆಳಕಂಡಂತೆ ವಾರ್ಷಿಕ ಪ್ರೋತ್ಸಾಹ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಿ ಷರತ್ತುಗಳಿಗೆ ಒಳಪಟ್ಟು ವಿತರಿಸಲು ಕ್ರಮವಹಿಸಲಾಗಿದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ಕ್ರ. ಸಂ</th><th>ಶೈಕ್ಷಣಿಕ ಹಂತ</th><th>ಪ್ರೋತ್ಸಾಹ ಧನ (ರೂ.ಗಳಲ್ಲಿ)</th></tr>
<tr><td>1.</td><td>ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ)</td><td>5,000/-</td></tr>
<tr><td>2.</td><td>ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ</td><td>5,000/-</td></tr>
<tr><td>3</td><td>ಪದವಿ ಶಿಕ್ಷಣ</td><td>7,000/-</td></tr>
<tr><td>4.</td><td>ಸ್ನಾತಕೋತ್ತರ ಪದವಿ ಶಿಕ್ಷಣ</td><td>15,000/-</td></tr>
<tr><td>5.</td><td>ಇತರೆ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ)</td><td>25,000/-</td></tr>
<tr><td>6.</td><td>ವೈದ್ಯಕೀಯ / ಡೆಂಟಲ್ ಶಿಕ್ಷಣ</td><td>50,000/-</td></tr>
<tr><td>7.</td><td>ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್)</td><td>25,000/-</td></tr>
<tr><td>8.</td><td>ವಿದೇಶ ವ್ಯಾಸಂಗ</td><td>1,00,000/- (ಒಂದು ಬಾರಿ ಮಾತ್ರ)</td></tr>
</table>
ಈವರೆಗೆ 257 ವಿದ್ಯಾರ್ಥಿಗಳಿಗೆ ಒಟ್ಟು ರೂ.35,61,000.00 (ಮೂವತ್ತೈದು ಲಕ್ಷದ, ಅರವತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಪ್ರೋತ್ಸಾಹ ಧನವನ್ನು ಪಾವತಿಸಲಾಗಿರುತ್ತದೆ.<br><br>
iii. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 16ರ ಅಡಿಯಲ್ಲಿ ಅಧಿಸೂಚಿತ ಸಂಸ್ಥೆಗಳ ಅರ್ಚಕರು ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನವನ್ನು ಕಲ್ಪಿಸಲಾಗಿರುತ್ತದೆ.<br><br>
iv. ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯ/ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರು ಹಾಗೂ ಅವರ ಕುಟುಂಬದ ಒಬ್ಬ ಸದಸ್ಯರು "ಕರ್ನಾಟಕ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಯಾತ್ರೆ" ಯೋಜನೆಯಡಿ ಉಚಿತವಾಗಿ ಕಾಶಿ ಯಾತ್ರೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.
</td></tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ)</td><td>ಈ ದೇವಸ್ಥಾನಗಳ ಸುಪರ್ದಿಯಲ್ಲಿ ನಡೆಯುತ್ತಿರುವ ಶಾಲೆಗಳ ಶಿಕ್ಷಕರಿಗೆ ಸಂಬಳ ನೀಡದಿರಲು ಕಾರಣವೇನು; ಬಾಕಿ ಮೊತ್ತ ಎಷ್ಟು; ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು; ಈ ದೇವಸ್ಥಾನಗಳ ಆದಾಯದ ಸ್ವಲ್ಪ ಭಾಗವನ್ನು ಸ್ಥಳೀಯ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸುವ ವಿಚಾರದಲ್ಲಿ ಇರುವ ತೊಂದರೆಗಳೇನು; ಅವುಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ವತಿಯಿಂದ ನಡೆಸಲಾಗುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಸದರಿ ದೇವಾಲಯಗಳಿಂದ ವೇತನ ಪಾವತಿಸಲು ತಹಲ್ ವರೆಗೆ ಬಾಕಿ ಇರುವುದಿಲ್ಲ.<br>ಕದ್ರಿ ಶ್ರೀ ಮಂಜುನಾಥ ಮತ್ತು ಶ್ರೀ ಮಂಗಳೂರು ಮಂಗಳಾದೇವಿ ಈ ಎರಡು ದೇವಾಲಯಗಳ ವತಿಯಿಂದ ಶಿಕ್ಷಣ ಸಂಸ್ಥೆಗಳನ್ನು ನಡೆಸಲಾಗುತ್ತಿಲ್ಲ.<br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997, ಮತ್ತು ನಿಯಮಗಳು 2002ರಡಿಯಲ್ಲಿ ಇಲಾಖಾ ದೇವಾಲಯಗಳ ಆದಾಯವನ್ನು ಸ್ಥಳೀಯ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸಲು ಅವಕಾಶವಿಲ್ಲದಿರುವುದರಿಂದ ಈ ದೇವಾಲಯಗಳ ಆದಾಯವನ್ನು ಸದರಿ ಉದ್ದೇಶಕ್ಕೆ ಬಳಸಲಾಗುತ್ತಿಲ್ಲ.</td></tr>
<tr><td>ಉ)</td><td>ಸುಬ್ರಹ್ಮಣ್ಯ ಹಾಗೂ 'ಸಿ' ದರ್ಜೆ ದೇವಸ್ಥಾನಗಳಲ್ಲಿ ಖಾಲಿಯಿರುವ ಪ್ರಧಾನ ಅರ್ಚಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಸಲ್ಲಿಕೆಯಾಗಿವೆಯೇ; ಯಾವಾಗ ನೇಮಕಾತಿ ಪೂರ್ಣಗೊಳ್ಳಲಿದೆ; ದೇವಸ್ಥಾನಗಳಲ್ಲಿ ಸಿಬ್ಬಂದಿ ನೇಮಕ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಅವಕಾಶವಿದೆಯೇ; ಈ ಕುರಿತು ನಿಯಮ ಮಾರ್ಪಡಿಸುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?</td><td>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 9(1) ಮತ್ತು ನಿಯಮಗಳು 2002ರ ನಿಯಮ 12ರಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ ಅರ್ಚಕರು/ ನೌಕರರನ್ನು ಆಯಾಯ ದೇವಾಲಯಗಳಿಗೆ ಮಂಜೂರಾದ ಸಿಬ್ಬಂದಿ ಮಾದರಿಗೆ ಅನುಗುಣವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲ್ಲೂಕು ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದಲ್ಲಿ ಪ್ರಸ್ತುತ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿ ಸದರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ.
<table>
<tr><th>ಕ್ರಮ ಸಂ</th><th>ಹುದ್ದೆಗಳ ವಿವರ</th><th>ಹುದ್ದೆಗಳ ಸಂಖ್ಯೆ</th></tr>
<tr><td>1</td><td>ತಂತ್ರಿ/ಅರ್ಚಕ</td><td>01</td></tr>
<tr><td>2</td><td>ಅರ್ಚಕ</td><td>02</td></tr>
<tr><td>3</td><td>ಸಹಾಯಕ ಅರ್ಚಕ</td><td>01</td></tr>
<tr><td></td><td>ಒಟ್ಟು ಹುದ್ದೆಗಳು</td><td>04</td></tr>
</table></td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸದರಿ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿ ರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ: ಕಂಇ 31 ಮುಸೇವಿ 2021 ದಿನಾಂಕ:28.11.2023ರನ್ವಯ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ 'ಸಿ' ದೇವಾಲಯಗಳಲ್ಲಿ ವಂಶಪಾರಂಪರ್ಯವಾಗಿ ಪೂಜಾ ಕೈಂಕರ್ಯಗಳನ್ನು ನಿರ್ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅರ್ಚಕರ ನಿಧನ/ಅರ್ಚಕರು ವಯಸ್ಸಾದ ಸಂದರ್ಭಗಳು ತೀವ್ರ ರೀತಿಯ ಅನಾರೋಗ್ಯದ ನಿಮಿತ್ತ ಅರ್ಚಕರಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದೆ ಇರುವ ಸಂದರ್ಭಗಳಲ್ಲಿಯೂ ಸಹ ಅವರ ಅನುವಂಶಿಕ ಹಕ್ಕನ್ನು ಕಾನೂನು ಬದ್ಧ ವಾರಸುದಾರರಿಗೆ ವಹಿಸಲು ಅವಕಾಶ ಕಲ್ಪಿಸುವ ಸಲುವಾಗಿ, ವಂಶಪಾರಂಪರ್ಯ ಅರ್ಚಕರ ಹುದ್ದೆಯ ಬರಾಬರ್ದನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 9(1)ರಿಂದ ವಿನಾಯ್ತಿ ನೀಡಿ, ಕಾನೂನುಬದ್ಧ ವಾರಸುದಾರರಿಗೆ ವಹಿಸಲು ಕೆಲವು ಷರತ್ತುಗಳಿಗೊಳಪಟ್ಟು ತಹಶೀಲ್ದಾರ್ ಹಂತದಲ್ಲಿ ವರ್ಗಾವಣೆ ಮಾಡಲು ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿರುತ್ತದೆ.<br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು 2002ರಡಿಯಲ್ಲಿ ದೇವಸ್ಥಾನಗಳಲ್ಲಿ ಸಿಬ್ಬಂದಿ ನೇಮಕ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಅವಕಾಶವಿರುವುದಿಲ್ಲ. ಈ ಕುರಿತು ನಿಯಮ ಮಾರ್ಪಡಿಸುವ ಬಗ್ಗೆ ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ:ಕಂಇ 92 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

**ಮಾನ್ಯ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (2114) 223* ರ ಉಪಪ್ರಶ್ನೆ (ಅ) ಉತ್ತರಕ್ಕೆ ಸಂಬಂಧಿಸಿದಂತೆ ಅನುಬಂಧ-1**

## 1. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆ. (https://itms.kar.nic.in/ರಲ್ಲಿ ಲಭ್ಯವಿರುವಂತೆ)

**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಉತ್ತರ ದಿಕ್ಕಿನ ಗೋಡೆಗೆ ಒರಗಿಸಿರುವ ಕಲ್ಲು.
**ಶಾಸನ ವಿಷಯ** - ದೇವರ ಪೂಜೆಗೆ ಹಾಗೂ ಉಚಿತ ಭೋಜನದ ವ್ಯವಸ್ಥೆಗೆಂದು ಭೂಮಿದಾನ ನೀಡಿದ ವಿಷಯವನ್ನು ಶಾಸನವು ತಿಳಿಸುತ್ತದೆ.
**ಸ್ಥಳ** - ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಉತ್ತರ ದಿಕ್ಕಿನ ಗೋಡೆ.
**ಸ್ಕ್ರಿಪ್ಟ್ ವಿಧ** – ಕನ್ನಡ.

**ಶಾಸನ ವಿವರಗಳು** - ಕುಕ್ಕೆ ಸ್ಥಳದ ಕುರಿತು ಮಹತ್ವದ ಮಾಹಿತಿ ನೀಡುವ ಈ ಶಾಸನದ ಬಹುಭಾಗವು ನಾಶವಾಗಿದ್ದು, ಶಾಸನದ ಮೊದಲ ಕೆಲವು ಸಾಲುಗಳನ್ನು ಮಾತ್ರ ಓದಬಹುದಾಗಿದ ಗಣಾಧಿಪತಿ ಹಾಗೂ ಶಿವನ ಪ್ರಾರ್ಥನೆಯೊಂದಿಗೆ ಆರಂಭವಾಗುವ ಶಾಸನವು ಕುಮಾರಸ್ವಾಮಿ ಹಾಗೂ ಶಿವನ ಪ್ರಾರ್ಥನೆಯೊಂದಿಗೆ ಆರಂಭವಾಗುವ ಶಾಸನವು ಕುಮಾರಸ್ವಾಮಿ ಹಾಗೂ ಶೇಷ ಈ ಸ್ಥಳದಲ್ಲಿ ನೆಲೆಗೊಂಡ ವಿವರಗಳನ್ನು ತಿಳಿಸುತ್ತದೆ. ಸುಬ್ರಹ್ಮಣ್ಯನು ಭಕ್ತರ ಇಷ್ಟಾರ್ಥಗಳನ್ನು ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ದೇವರೆಂದು ಹೇಳಲಾಗಿದೆ. ಮುಸಲ್ಮಾನರನ್ನು ಸೋಲಿಸಿದ್ದ, ಗೋವಾ ಆರಗ ಪ್ರದೇಶದ ಪ್ರಸಿದ್ಧ ದೊರೆಯೂ, ಕವಿಯೂ ಆಗಿದ್ದ ಮಾಧವ ಮಂತ್ರಿಯು ದೇವರ ಪೂಜೆಗೆ ಹಾಗೂ ಕುಕ್ಕೆಯಲ್ಲಿನ ಬ್ರಾಹ್ಮಣರ ಉಚಿತ ಭೋಜನದ ವ್ಯವಸ್ಥೆಗೆಂದು ಭೂಮಿದಾನ ನೀಡಿದ ವಿಷಯವನ್ನು ಶಾಸನವು ತಿಳಿಸುತ್ತದೆ. ಶಾಸನದ ಕಾಲವು ಶಾಲಿವಾಹನ ಶಕದ ಪ್ರಭವ ಸಂವತ್ಸರ, ಪುಷ್ಯ ಬಹುಳ ೩ ಎಂದು ದಾಖಲಾಗಿದ್ದು, ಇದು ೨ನೆಯ ಹರಿಹರನ ಆಡಳಿತಾವಧಿಯ ಕ್ರಿ.ಶ. ೧೩೮೮ರ ಡಿಸೆಂಬರ್ ೧೬, ಬುಧವಾರಕ್ಕೆ ಸರಿಹೊಂದುತ್ತದೆ.

**ಆಕರ ಗ್ರಂಥದ ಹೆಸರು** - ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಪುರಾಣ
ಲೇಖಕ ಹೆಸರು - ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ಆಡಳಿತ ಮಂಡಳಿ
**ಆಕರ ಗ್ರಂಥದ ವಿವರಗಳು - ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಪುರಾಣ:** ಈ"ಸುಬ್ರಹ್ಮಣ್ಯ ಕ್ಷೇತ್ರ ವರ್ಣನೆ" ಎಂಬ ಪುಸ್ತಕದಲ್ಲಿ ಈ ಸ್ಥಳ ಸಂಕ್ಷಿಪ್ತ ಮಹಾತ್ಮೆಯನ್ನೂ, ಪ್ರೇಕ್ಷಣೀಯ ಸ್ಥಳಗಳ ವಿವರಣೆಯನ್ನೂ, ಇಲ್ಲಿಯ ನಡವಳಿಗಳನ್ನು ಸ್ವಾಮಿ ಉತ್ಸವ ಮುಂತಾದ ನಾನಾ ಚಿತ್ರಗಳನ್ನು, ಸ್ಥಳದಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸೇರಿಸಿ ಯಾತ್ರಿಕರ ಸೌಕರ್ಯಕ್ಕಾಗಿ ಇದನ್ನು ಪ್ರಕಟಿಸಿದೆ.

**<u>ಆಕರ ಗ್ರಂಥದ ಹೆಸರು</u>** - ಸ್ತುತಿ ಪದ್ಯಗಳು
**<u>ಲೇಖಕ ಹೆಸರು</u>** - ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ಆಡಳಿತ ಮಂಡಳಿ
**<u>ಆಕರ ಗ್ರಂಥದ ವಿವರಗಳು - ಸ್ತುತಿ ಪದ್ಯಗಳು:-</u>**
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ನಿತ್ಯಗಟ್ಟಲೆಯಲ್ಲಿಯೂ, ವಿಶೇಷ ಪಂಚಪರ್ವ ದಿನಗಳಲ್ಲಿಯೂ ಹಾಡತಕ್ಕ ಸ್ತುತಿ ಪದ್ಯಗಳನ್ನು ಮುದ್ರಿಸಲಾಗಿದೆ.

****

## 2. ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆ. (https://itms.kar.nic.in/ರಲ್ಲಿ ಲಭ್ಯವಿರುವಂತೆ)

**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಎ ಆರ್ ನಂ 26 1901
**ಶಾಸನ ವಿಷಯ** - ಕದ್ರಿ ದೇವಳದ ಇತಿಹಾಸದ ಬಗ್ಗೆ.
**ಸ್ಥಳ** - ದೇವಸ್ಥಾನದ ಮುಂಭಾಗ.
**ಸ್ಕ್ರಿಪ್ಟ್ ವಿಧ** - ಇತರೆ
**ಸೆಂಚುರಿ** - 10ನೇ ಶತಮಾನ
**ಶಾಸನ ವಿವರಗಳು** - ಕದ್ರಿ ದೇವಳದ ಇತಿಹಾಸದ ಬಗ್ಗೆ.


**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಎ ಆರ್ ನಂ.27 ಇ 1901
**ಶಾಸನ ವಿಷಯ** - ಕದ್ರಿ ದೇವಸ್ಥಾನ ಮತ್ತು ಕದ್ರಿ ಯೋಗೇಶ್ವರ ಮಠದ ಚರಿತ್ರೆಯ ವಿವರ
**ಸ್ಥಳ** - ಕದ್ರಿ ಯೋಗೇಶ್ವರ ಮಠ
**ಸ್ಕ್ರಿಪ್ಟ್ ವಿಧ** - ಇತರೆ
**ಸೆಂಚುರಿ** - 10ನೇ ಶತಮಾನ
**ಶಾಸನ ವಿವರಗಳು** - ಕದ್ರಿ ದೇವಸ್ಥಾನ ಮತ್ತು ಕದ್ರಿ ಯೋಗೇಶ್ವರ ಮಠದ ಚರಿತ್ರೆಯ ವಿವರ.

**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಎ ಆರ್ ನಂ.27-ಎ 1901
**ಶಾಸನ ವಿಷಯ** - ದೇವಳದ ಪರಿಸರದ ದೇವರುಗಳಿಗೆ ನಡೆಯತಕ್ಕ ವಿನಿಯೋಗಗಳ ಬಗ್ಗೆ ವ್ಯವಸ್ಥೆಯ ಮಾಹಿತಿ
**ಸ್ಥಳ** - ತೀರ್ಥ ಕೆರೆಗಳ ಪಕ್ಕ
**ಸ್ಕ್ರಿಪ್ಟ್ ವಿಧ** - ಇತರೆ
**ಸೆಂಚುರಿ** - 10ನೇ ಶತಮಾನ
**ಶಾಸನ ವಿವರಗಳು** - ದೇವಳದ ಪರಿಸರದ ದೇವರುಗಳಿಗೆ ನಡೆಯತಕ್ಕ ವಿನಿಯೋಗಗಳ ಬಗ್ಗೆ ವ್ಯವಸ್ಥೆಯ ಮಾಹಿತಿ.

**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಎ ಆರ್ ನಂ 27 ಸಿ 1901
**ಶಾಸನ ವಿಷಯ** - ವಿಜಯನಗರದ ಮಹಾರಾಜರ ಆಯುಷ್ಯಾಭಿವೃದ್ಧಿಗೆ ಮಾಡಿರತಕ್ಕ ಜಪದ ವಿವರ.
**ಸ್ಥಳ** - ಕದ್ರಿ ಯೋಗೇಶ್ವರ ಮಠ
**ಸ್ಕ್ರಿಪ್ಟ್ ವಿಧ** - ಇತರೆ
**ಶಾಸನ ವಿವರಗಳು** - ವಿಜಯನಗರದ ಮಹಾರಾಜರ ಆಯುಷ್ಯಾಭಿವೃದ್ಧಿಗೆ ಮಾಡಿರತಕ್ಕ ಜಪದ ವಿವರ
**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ತ್ರಿಲೋಕೇಶ್ವರ
**ಶಾಸನ ವಿಷಯ** - ತ್ರಿಲೋಕೇಶ್ವರ ಮೂರ್ತಿ
**ಸ್ಥಳ** - ದೇವಳದ ಒಳಗೆ

**ಸ್ಕ್ರಿಪ್ಟ್ ವಿಧ** - ಇತರೆ
**ಸೆಂಚುರಿ** - 10ನೇ ಶತಮಾನ
**ಶಾಸನ ವಿವರಗಳು** - ಮುಖ್ಯ ದೇವಸ್ಥಾನದ ಗರ್ಭಗುಡಿಯ ಬಲಭಾಗದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ತ್ರಿಲೋಕೇಶ್ವರ ಮೂರ್ತಿಯು ಕ್ರಿ.ಪೂ. 968ರಲ್ಲಿ ಪಂಚಲೋಹದ್ದಾಗಿರುತ್ತದೆ.

**ಇತಿಹಾಸ**



ದೇಗುಲದ ಸ್ಥಳಪುರಾಣ ಪ್ರಾಚೀನ ಹಾಗೂ ವಿಶಿಷ್ಟವಾದ `ಭರದ್ವಾಜಸಂಹಿತೆ ಎಂಬ ಗ್ರಂಥದಲ್ಲಿ ಇದರ ಆದಿಚರಿತ್ರೆಯು ಉಲ್ಲೇಖಿಸಲ್ಪಟ್ಟಿದೆ. ಈಗ ದೇವಸ್ಥಾನವಿರುವ ಸ್ಥಳಕ್ಕೆ ಹಿಂದಿನ ಕಾಲದಲ್ಲಿ ಸುವರ್ಣ ಕದಳೀವನ ಎಂಬ ಹೆಸರಿತ್ತು. ಸರ್ವಸಿದ್ಧಿ ಮಹಾಸ್ಥಾನಂ, ಸರ್ವ ಸೌಭಾಗ್ಯದಾಯಕಂ, ಸರ್ವಸಂತಾಪಹರಣ ಎಂಬೀ ನಿರುಪಮ ಪಾವಿತ್ರ್ಯದಿಂದಾಗಿ ಸ್ಥಳವು ಸುಪ್ರಸಿದ್ಧವಾಗಿತ್ತು. ಸ್ಥಳ ಪುರಾಣದ ಪ್ರಕಾರ ದೇವಸ್ಥಾನದ ಪ್ರಾಚೀನ ಚರಿತ್ರೆ ಶ್ರೀ ಪರಶುರಾಮನು ಬ್ರಾಹ್ಮಣರಿಗೆ ದಾನವಾಗಿ ಎಲ್ಲವನ್ನೂ ಅರ್ಪಿಸಿದ ನಂತರ ಪರಮೇಶ್ವರನನ್ನು ಒಲಿಸಿಕೊಳ್ಳುವುದಕ್ಕಾಗಿ ಘನಘೋರ ತಪಶ್ಚರ್ಯೆಯನ್ನು ಕೈಕೊಂಡನು. ಪರಮೇಶ್ವರನು ಅವನ ಅನನ್ಯ ಭಕ್ತಿಗೆ ಮೆಚ್ಚಿ "ಹೇ ಪರಶುರಾಮಾ, ನಾನು ಸುವರ್ಣ ಕದಳೀ ವನದಲ್ಲಿರುವ ರಸಕೂಪದಲ್ಲಿ ಸದಾ ನೆಲಸಿರುವೆನು. ಅಲ್ಲಿಗೆ ಹೋಗಿ ನನ್ನನ್ನು ಆರಾಧಿಸು" ಎಂದನು. ಆದರೆ ಆ ಕಾಲದಲ್ಲಿ ಸುವರ್ಣ ಕದಳೀವನವು ಸಮುದ್ರದ ಅಡಿಯಲ್ಲಿದ್ದ ಕಾರಣ ಪರಶುರಾಮನು ಸಮುದ್ರದಿಂದ ಈ ಸ್ಥಳವನ್ನು ಮರಳಿ ಪಡೆದು `ರಸಕೂಪ`ವನ್ನು ಬಹು ದೀರ್ಘಕಾಲದವರೆಗೆ ಆರಾಧಿಸುತ್ತಿದ್ದನು. ಕಟ್ಟಕಡೆಗೆ ಮಹಾ ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರು ತಮ್ಮ ದಿವ್ಯ ಶಕ್ತಿ ಸಮ್ಮಿಳನದಿಂದ ಶ್ರೀ ಮಂಜುನಾಥ ರೂಪದಲ್ಲಿ ವ್ಯಕ್ತರಾಗಿ ಪರಶುರಾಮನ ಮನೋಭಿಲಾಷೆಯನ್ನು ನೆರವೇರಿಸಿದರು. ಶ್ರೀ ಮಂಜುನಾಥನ ಉದ್ಭವವನ್ನು ಹಿಂಬಾಲಿಸಿ ಅನೇಕಾನೇಕ ಅದ್ಭುತ ಕಾರ್ಯಗಳು ಘಟಿಸಿದ ವಿಷಯವು ಕೂಡಾ `ಭರದ್ವಾಜಸಂಹಿತೆ`ಯ ಒಂಭತ್ತನೆಯ ಅಧ್ಯಾಯದಲ್ಲಿ ವಿವೃತವಾಗಿದೆ. ಸಪ್ತಕೋಟಿ ಮಹಾ ಮಂತ್ರಗಳೆಂಬ ಏಳು ಕೋಟಿ ಪವಿತ್ರ ಕೀರ್ತನೆಗಳು ತಾವಾಗಿ ಏಳು ತೀರ್ಥಗಳಾಗಿ ರೂಪಾಂತರ ಹೊಂದಿದುವಲ್ಲದೆ ಶಿವಪುಷ್ಕರಣಿಯು ಬಹು ಪ್ರಸಿದ್ಧವಾಯಿತು. ಅದೇ ಸಮಯದಲ್ಲಿ ಪವಿತ್ರ ಭಾಗೀರಥೀ ತೀರ್ಥವು ಒಂದು ರಂಧ್ರದಲ್ಲಿ ಹೊರಸೂಸಿ ಈಶಾನ್ಯ ದಿಕ್ಕಿನಲ್ಲಿ ತಲೆದೋರಿತು. ಸ್ವಯಂಭೂ ಲಿಂಗೋದ್ಭವ ಸ್ಥಳಪುರಾಣದ ಉತ್ತರಾಧ್ಯಾಯಗಳಲ್ಲಿ ಮಹಾಯತಿಗಳಾದ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಚೌರಂಗಿನಾಥ ಮೊದಲಾದವರ ಜನ್ಮಸಾಹಸ ಕೃತ್ಯಾದಿಗಳನ್ನು ಕುರಿತು ವಿವರಿಸಲ್ಪಟ್ಟಿದೆ. ಶಿವನ ಅವತಾರವಾದ ಮತ್ಸ್ಯೇಂದ್ರನಾಥನು ಪಾರ್ವತಿಯ ಅವತಾರವಾದ "ಮಂಗಲಾ" ಎಂಬ ರಾಣಿಯನ್ನು ತನ್ನ ಪ್ರೀತಿಯ ಶಿಷ್ಯ ಗೋರಕ್ಷನಾಥನನ್ನೂ

ಕೂಡಿಕೊಂಡು 'ಸತಿರಾಜ್ಯ'ದಿಂದ ಮರಳಿ ಬರುತ್ತಿರುವಾಗ ಸುವರ್ಣ ಕದಳೀವನಕ್ಕೆ ಬಂದನೆಂದೂ ಅಲ್ಲಿರುವ ಇತರ ಶಿಷ್ಯರು ಅವನನ್ನು ಸ್ವಾಗತಿಸಿದರೆಂದೂ ಮುಂದೆ ಹೇಳಲ್ಪಟ್ಟಿದೆ. ಆಗ ಮತ್ಸ್ಯೇಂದ್ರನಾಥನು ಸುವರ್ಣ ಕದಳೀವನದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಿಸಬೇಕೆಂದು ನಿಶ್ಚಯಿಸಿ, ತನ್ನ ಶಿಷ್ಯನೊಡನೆ ಕಾಶಿಗೆ ಹೋಗಿ ಶಿವಲಿಂಗವನ್ನು ತರಹೇಳಿದನು. ಆದರೆ ಕ್ಲಪ್ತ ಕಾಲದಲ್ಲಿ ಗೋರಕ್ಷನಾಥನು ಶಿವಲಿಂಗವನ್ನು ತಾರದೆ ಹೋದುದರಿಂದ ಮತ್ಸ್ಯೇಂದ್ರನು ಶಿವನನ್ನು ಕುರಿತು ಉಗ್ರ ತಪಸ್ಸನ್ನು ಮಾಡಲು ಅವನ ಪ್ರಾರ್ಥನೆಯ ಫಲವಾಗಿಯೋ ಎಂಬಂತೆ ಅಲ್ಲಿ ನೆರೆದಿದ್ದ ಎಲ್ಲ ಯತಿಗಳಿಗೆ ಸಂತೋಷವೂ ಆಶ್ಚರ್ಯವೂ ಉಂಟಾಗುವಂತೆ ಒಂದು ಸ್ವಯಂಭೂಲಿಂಗವು ಉದ್ಭವಿಸಿತು. ಆದರೆ ಉದ್ಭವವಾದ ತರುವಾಯ ಗೋರಕ್ಷನಾಥನು ಕಾಶಿಯಿಂದ ಒಂದು ಶಿವಲಿಂಗವನ್ನು ತರಲು ಅದರ ಅವಶ್ಯಕತೆ ಆಗ ಇಲ್ಲದೆ ಹೋದ ಕಾರಣ ಅದನ್ನು ಸಮೀಪದ ಒಂದು ತೀರ್ಥದಲ್ಲಿ ಕಾಯ್ದಿಡಲಾಯಿತು. ಬಹು ಕಾಲದ ನಂತರ ಆ ಶಿವಲಿಂಗವನ್ನು ಅಣ್ಣಪ್ಪ ದೈವವು ಧರ್ಮಸ್ಥಳಕ್ಕೆ ಕೊಂಡೊಯ್ಯಲು ಅಲ್ಲಿ ಅದು ಉಡುಪಿಯ ಪ್ರಖ್ಯಾತ ವಾದಿರಾಜ ಸ್ವಾಮಿಯವರಿಂದ ಪ್ರತಿಷ್ಠಿಸಲ್ಪಟ್ಟಿತು. ಆದುದರಿಂದ ಧರ್ಮಸ್ಥಳಕ್ಕೆ ಕದ್ರಿ ಕ್ಷೇತ್ರವು 'ಆದಿ' ದೇವಸ್ಥಾನವಾಯಿತು. ಉಪಸಂಹಾರದ ಅಧ್ಯಾಯದಲ್ಲಿ ಯತಿ ಭರದ್ವಾಜನು ಈ ಸುವರ್ಣ ಕದಳೀವನ ಕ್ಷೇತ್ರವನ್ನು ಸಂದರ್ಶಿಸಿ, ಶ್ರೀ ಮಂಜುನಾಥ ಸ್ವಾಮಿಯನ್ನು ಆರಾಧಿಸಿದ ಭಕ್ತ ಜನರ ಅತ್ಯಪೂರ್ವ ಯೋಗ್ಯತೆಗಳನ್ನೂ ಶಕ್ತಿಯನ್ನೂ ಕುರಿತು ಕೊಂಡಾಡಿರುವನು.

*****

## 3. ಬೋಳಾರ, ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆ. (https://itms.kar.nic.in/ರಲ್ಲಿ ಲಭ್ಯವಿರುವಂತೆ)

ಇತಿಹಾಸ



ತುಳು ನಾಡನ್ನು ಆಳುವ ವಂಶದ ಅರಸರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಕುಂದವರ್ಮನು ಮಂಗಳಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತುಳುನಾಡನ್ನು ಆಳುತ್ತಿದ್ದನು. ಅದೇ ಸಮಯ ಉತ್ತರ ನೇಪಾಳ ದೇಶದಿಂದ ಮಚ್ಚೇಂದ್ರನಾಥ ಗೋರಕನಾಥರೆಂಬ ಯೋಗಿದ್ವಯರು ತಮ್ಮ ಶಿಷ್ಯ ಗಣದೊಂದಿಗೆ ನೇತ್ರಾವತಿ ನದಿಯನ್ನು ದಾಟಿ, ಮಂಗಳಾಪುರಕ್ಕೆ ಕಾಲಿರಿಸುವರು ಆ ಸ್ಥಳವನ್ನು ಇಂದಿಗೂ ಗೋರಕ ದಂಡು ಎಂದು ಕರೆಯುತ್ತಿರುವ ವಾಡಿಕೆಯಾಗಿದೆ. ಅಲ್ಲಿಂದ ಅವರು ಪರಶುರಾಮನಾರಿದಿದ ಸ್ಥಳಕ್ಕೆ ಬರುವರು, ಆ ಸ್ಥಳದಲ್ಲಿ ಹಿಂದೆ ಮಹಾಯೋಗಿಗಳಾದ ಕಪಿಲ ಮುನಿಗಳು ಆಶ್ರಮವನ್ನು ರಚಿಸಿ, ತಮ್ಮ ಶಿಷ್ಯರಿಗೆ ವೇದಧ್ಯಯನ ಮುಂತಾದ ಧಾರ್ಮಿಕ ಪಾಠಗಳನ್ನು ಹೇಳಿ ಕೊಡುತ್ತಿದ್ದರು. ಆ ಪ್ರಶಾಂತವಾದ ಸ್ಥಳದಲ್ಲಿ ಮಚ್ಚೇಂದ್ರನಾಥ ಗೋರಕನಾಥರು ತಮ್ಮ ಶಿಷ್ಯರೊಂದಿಗೆ ಬೀಡು ಬಿಟ್ಟು ಸಿದ್ಧ ಯೋಗದಲ್ಲಿ ನಿರತರಾಗಿದ್ದರು. ಸಿದ್ಧ ಪುರುಷರಿಬ್ಬರು ಶಿಷ್ಯ ಸಮೇತರಾಗಿ ಬಂದು ತಮ್ಮ ಪಟ್ಟಣದಲ್ಲಿ ನೆಲಸಿರುವ ವಾರ್ತೆಯನ್ನು ಕೇಳಿ ಹರ್ಷಚಿತ್ತನಾದ ಕುಂದವರ್ಮನು ತನ್ನ ಪರಿವಾರದೊಂದಿಗೆ, ಆ ಸಿದ್ಧ ಪುರುಷರು ಇದ್ದೆಡೆಗೆ ಬರುತ್ತಾನೆ, ಯೋಗ ಸಿದ್ಧಿಯಿಂದ ತೇಜೋಪುಂಜರಾಗಿ ಧ್ಯಾನಸಕ್ತರಾಗಿ ಕುಳಿತಿದ್ದ ಯೋಗಿಗಳಿಬ್ಬರಿಗೂ ನಮಸ್ಕರಿಸಿ, ಅವರ ಯೋಗ ಕ್ಷೇಮವನ್ನು ವಿಚಾರಿಸುವರು. ಅರಸರನ್ನು ಕಂಡ ಮಚ್ಚೇಂದ್ರನಾಥರು ನೀನು ಯಾರೆಂದು ವಿಚಾರಿಸಿದಾಗ, ನಾನು ಈ ತುಳುನಾಡನ್ನಾಳುವ ಅರಸ, ಕುಂದವರ್ಮ ಎಂದು ನನ್ನ ಹೆಸರು. ತಾವು ಶಿಷ್ಯ ಸಮೇತರಾಗಿ ಬಂದಿರುವ ವಿಚಾರ ತಿಳಿದು, ತಮ್ಮ ಕ್ಷೇಮ ಸಮಾಚಾರ ವಿಚಾರಿಸಿ ತಮಗೆ ಬೇಕಾಗುವ ಅನುಕೂಲಗಳನ್ನು ಮಾಡಿಕೊಡುವ ಸಲುವಾಗಿ ಬಂದಿರುವುದಾಗಿ ತಿಳಿಸುವನು, ಮಚ್ಚೇಂದ್ರನಾಥರು ತೃಪ್ತಿಯಿಂದ ನಕ್ಕು, ತಲೆಯನ್ನಾಡಿಸಿ, ರಾಜ, ಈ ನಿನ್ನ ರಾಜ್ಯ ಪರಮ ಪಾವನವಾದ ನಾಡು, ಸಿದ್ಧಿ ಕ್ಷೇತ್ರವೂ ಹೌದು ಮಂತ್ರ ಮುಖೇನ ಯೋಗಿಗಳು ಮಂತ್ರ ಸಿದ್ಧಿಯನ್ನು ಪಡೆದಿರುವ ದಿವ್ಯ ಕ್ಷೇತ್ರವಿದು. ಇದಕ್ಕೆ ಕಾರಣ ಅವತಾರ ರೂಪಿಯಾದ ಪರಶುರಾಮರು ತಪವನ್ನಾಚರಿಸಿ ಲೋಕ ಮಾತೆಯಾದ ಶ್ರೀ ಮಂಗಳಾದೇವಿಯನ್ನು ಪ್ರತ್ಯಕ್ಷೀಕರಿಸಿ ಪಾವನವಾದ ಕ್ಷೇತ್ರ ಮಾತ್ರವಲ್ಲ ಶ್ರೀ ಮಂಗಳಾದೇವಿಯ ಲೀಲೆಯಂತೆ ಆಕೆಗೆ ಭವ್ಯವಾದ ಮಂದಿರವನ್ನು ರಚಿಸಿ, ಪೂಜಿಸುತ್ತಿದ್ದ ಸ್ಥಳ, ಇಲ್ಲಿ ಹಲವಾರು ಯೋಗಿಗಳೂ, ಋಷಿ ಮುನಿಗಳೂ ಆಶ್ರಮವನ್ನು ರಚಿಸಿ, ಆಧ್ಯಾತ್ಮಿಕ ಚಿಂತನೆಯ ಜತೆ ಯೋಗಸಿದ್ಧಿಯನ್ನು ಹೇಳಿಕೊಡುತ್ತಿದ್ದರು. ಈ ಸ್ಥಳ ನಮಗೆ ತುಂಬಾ ತೃಪ್ತಿಯನ್ನಿತ್ತಿದೆ. ಈ ಬೆಟ್ಟವನ್ನು ನಮ್ಮ ವಾಸ್ತವ್ಯಕ್ಕಾಗಿ ನಮಗೆ ನೀಡಿ ನಾವು ಇಲ್ಲೇ ನಮ್ಮ ಮಠವನ್ನು ಸ್ಥಾಪಿಸುವೆವು. ಸರ್ವ ಪಂಥದ ಪ್ರಚಾರವು ಇಲ್ಲಿಂದಲೇ ಪ್ರಾರಂಭವಾಗುವುದು. ನಮ್ಮ ಪಂಥದ ಪ್ರಚಾರಕ್ಕೆ ಯಾರಿಂದಲೂ ಅಡೆತಡೆಗಳು ಬಾರದಂತೆ ನೀನು ನೋಡಿಕೊಂಡಿರಬೇಕು ನಿನಗೆ ಮಂಗಳವಾಗಲಿ ಎಂದಾಗ, ಕುಂದವರ್ಮನು ಭಯಭಕ್ತಿಯಿಂದ ನಮಿಸಿ,ತಮ್ಮ ಆಜ್ಞೆಯನ್ನು ಶಿರಸಾವಹಿಸಿ

ನಡೆಸಿಕೊಂಡು ಬರುವೆನೆಂದು ವಚನವಿತ್ತು. ಆದರೆ ಶ್ರೀ ಮಂಗಳಾದೇವಿಯ ಮಂದಿರವನ್ನು ನಾನು ನನ್ನ ಕರ್ತವ್ಯವೆಂದು ಹೇಳಿ ಹಿಂದೆ ಹಿರಣ್ಯಾಕ್ಷನ ಮಗಳಾದ ವಿಖಾಸಿನಿ ಎಂಬ ರಾಕ್ಷಸಿಯ ಕಥೆಯನ್ನು ಹೇಳಿ ಆಕೆಯ ಮಗನಾದ ಅಂಡಾಸುರನು ಶ್ರೀ ಮಂಗಳಾದೇವಿಯಿಂದ ವಧಿಸಲ್ಪಟ್ಟ ಸ್ಥಳ ಆಗ ಈ ಸ್ಥಳ, ಸಮುದ್ರದಿಂದ ಆವರಿಸಿಕೊಂಡಿತ್ತು. ಪರಶುರಾಮರಿಂದಾಗಿ ಈ ನೆಲ "ಪರಶುರಾಮ ಸೃಷ್ಟಿ" ಎಂದು ಖ್ಯಾತಿ ಪಡೆಯಿತು ಇಲ್ಲೇ ಸನಿಹದಲ್ಲಿ ಪರಶುರಾಮರು ತಪಸ್ಸು ಮಾಡಿ ಶ್ರೀ ಮಂಗಲಾದೇವಿಯನ್ನು ಪ್ರತಕ್ಷೀಕರಿಸಿ, ಆಕೆಯ ಅಪ್ಪಣೆಯಂತೆ ಆಕೆಯ ಲಿಮ್ಮರೂಪದ ಬಿಂಬವನ್ನು ಪ್ರತಿಷ್ಠಾಪಿಸಿ ಸುಂದರವಾದ ಮಂದಿರವನ್ನು ಕಟ್ಟಿಸಿದರು.ಆದರೆ ಆ ದೇವಿ ಮಂದಿರವು ಭಗ್ನವಾಗಿ ದಿಬ್ಬ ಎದ್ದಿದೆ ಅದರ ಅಡಿಯಲ್ಲಿ ಶಿವ-ಶಕ್ತಿ ಪ್ರಭಾವದ ಲಿಂಗ ರೂಪದ ಬಿಂಬವೂ ಧಾರಾ ಪಾತ್ರೆಯೂ ಇದೆ. ಅದರ ರಕ್ಷಣೆಗೆ ಆಕೆಯ ಪರಿಹಾರ ದೈವಗಳೂ ನಾಗರಾಜನು ಇದ್ದಾನೆ. ನೀನು ನನ್ನೊಂದಿಗೆ ಬಾ, ನಿನಗೆ ಆ ಪುಣ್ಯ ಸ್ಥಳವನ್ನು ತೋರಿಸುವೆನು ಎಂದು ಕುಂದ ವರ್ಮನನ್ನು ಜತೆ ಸರಿ ಹೊರಡುವರು ನಂತರ ಶ್ರೀ ಮಂಗಳಾದೇವಿಗೆ ಸುಂದರವಾದ ಮಂದಿರವನ್ನು ನಿರ್ಮಿಸಿ, ಶಿವ-ಶಕ್ತಿಯರು ಕೂಡಿದ ಲಿಮ್ಮ ರೂಪದ ಬಿಂಬವನ್ನು ಪುನರ್ ಪ್ರತಿಷ್ಠಾಪನೆ ಮಾಡಿ ಧಾರಾ ಪಾತ್ರೆಯನ್ನಿಟ್ಟು ಪೂಜಿಸು ನಿನಗೆ ಮಂಗಳವಾಗುವುದು. ಈ ದೇವಿಯ ವಿಶೇಷ ಅನುಗ್ರಹವೆಂದು ಶೋಡಶಿಯಾದ ಯಾವ ಕುವರಿಗೆ ಕಂಕಣ ಭಾಗ್ಯ ಬಂದಿರುವುದಿಲ್ಲವೂ ಆ ಕನ್ಯೆ ಈ ಕ್ಷೇತ್ರಕ್ಕೆ ಬಂದು ದೀಕ್ಷೆಯಿಂದಿದ್ದು ಪಾರ್ವತಿ ಸ್ವಯಂವರ ವ್ರತವನ್ನು ಕೈಕೊಂಡರೆ ಆಕೆಗೆ ಉತ್ತಮ ಗುಣವಂತನೂ ಐಶ್ವರ್ಯವಂತನಾದ ಪತಿಯು ದೊರಕುವನು, ಅಲ್ಲದೆ ಈ ಸನ್ನಿಧಾನದಲ್ಲಿ ವಧು ವರರಿಗೆ ಧಾರೆ ಎರೆದರೆ (ಮದುವೆ) ಅವರಿಗೆ ಸಕಲಾಷ್ಟ ಸೌಭಾಗ್ಯ ದೊರಕುವುದು ಆದುದರಿಂದ ದಕ್ಷಿಣ ದಿಕ್ಕಿನಿಂದ ಹರಿಯುವ ನೇತ್ರಾವತಿ ಉತ್ತರದಿಂದ ಹರಿದು ಬರುವ ಪಾಲ್ಗುಣಿ ನದಿಗಳು ಸಂಗಮವಾಗಿ ಸಮುದ್ರ ಸೇರುತ್ತದೆ. ಈ ಪುಣ್ಯ ಕ್ಷೇತ್ರದಲ್ಲಿ ಮಮ್ಮಿರವನ್ನು ಕಟ್ಟುವ ಕಾರ್ಯವನ್ನು ಮಾಡು ಎಂದು ಹರಸುವನು. ಕುಂದವರ್ಮನು ಮಚ್ಚೇಂದ್ರನಾಥರ ಅಪ್ಪಣೆಯಂತೆ ಯೋಗ್ಯ ಶಿಲ್ಪಿಗಳನ್ನು ಕರೆಯಿಸಿ ಶ್ರೀ ಮಂಗಳಾದೇವಿಗೆ ಅವರಿಂದ ಮಂದಿರವನ್ನು ನಿರ್ಮಿಸಿ ಲಿಂಗರೂಪದ ಬಿಂಬವನ್ನು ಪುನರ್ ಪ್ರತಿಷ್ಠಾಪಿಸಿ ನಿಷ್ಠಾವಂತರಾದ ಯೋಗ್ಯ ಬ್ರಾಹ್ಮಣರಿಂದ ತ್ರೀಕಾಲ ಪೂಜೆಗೆ ವ್ಯವಸ್ಥೆ ಮಾಡುವನು. ಈ ಕಾರ್ಯಕ್ರಮದಲ್ಲಿ ಮಚ್ಚೇಂದ್ರನಾಥರ ಶಿಷ್ಯರಾದ ಗೋರಕನಾಥರು ಉಪಸ್ಥಿತರಿದ್ದು ಮಾತ್ರವಲ್ಲದೆ ಶ್ರೀ ಮಂಗಳಾದೇವಿಗೆ ಪಟ್ಟೆ ವಸ್ತ್ರವನ್ನು ಅರ್ಪಿಸಿ ಪೂಜಿಸಿದರು ಅದರ ಕುರುಹಾಗಿ ಇಂದಿಗೂ ಕದ್ರಿ ಮಠದ ಯೋಗಿರಾಜರು ಕದ್ರಿ ಉತ್ಸವದ ಮೊದಲ ದಿನ ಶ್ರೀಮಂಗಳಾದೇವಿ ದೇವಸ್ಥಾನಕ್ಕೆ ಬಂದು ಶ್ರೀ ದೇವಿಗೆ ಪೀತಾಂಬರ ಅರ್ಪಿಸಿ ಪೂಜೆ ಒಪ್ಪಿಸುವ ಕ್ರಮ ನಡೆದುಕೊಂಡು ಬಂದಿದೆ. ಪಶ್ಚಿಮ ಸಮುದ್ರ ತೀರದಲ್ಲಿರುವ ತುಳು ರಾಜ್ಯವನ್ನು ಸೂರ್ಯವಂಶದ ವೀರಬಾಹು ಎಂಬ ರಾಜನು ಆಳುತ್ತಿದ್ದನು. ಅವನ ರಾಜಧಾನಿಯ ಸನೀಹದಲ್ಲೇ ಪರಶುರಾಮನ ತಪೋಭೂಮಿ ಇದ್ದು, ಅದರ ಹತ್ತಿರದಲ್ಲೇ ಆಶ್ರಮವನ್ನು ನಿರ್ಮಿಸಿ ತಪೋಧನರಾದ ಭಾರದ್ವಜಮುನಿಯ ಶಿಷ್ಯನಾಗಿದ್ದು ಅವರ ಪೂರ್ಣ ವಿಶ್ವಾಸ ಹಾಗೂ ಅನುಗ್ರಹಕ್ಕೆ ಪಾತ್ರನಾಗಿದ್ದನು. ಕಾಲ ಧರ್ಮ ಪ್ರಕಾರ ರಾಜನು ವೃದ್ಧನಾಗಲು, ತಪೋನಿಧಿಯಾದ ಭಾರಧ್ವಜ ಮುನಿಗಳಿಗೆ ಕೈ ಮುಗಿದು, ಮುನಿವರ್ಯಾ ತಮ್ಮ ಪೂರ್ಣಾನುಗ್ರಹದಿಂದ ನಾನು ಧನ್ಯಥಾ ಭಾವವನ್ನು ಹೊಂದಿರುವೆನು ತಮ್ಮ ಕರುಣೆಯಿಂದ ಪ್ರಜಾಪರಿವಾರದವರು ಸುಖದಿಂದಿರುವರು. ಸ್ವಾಮಿ, ಕಾಲಧರ್ಮದಂತೆ ನಾನೀಗ ವೃದ್ಧನಾಗಿರುವೆನು. ಆ ಪ್ರಯುಕ್ತ ನಾನು ವಾನಪ್ರಸ್ಥಾಶ್ರಮವನ್ನು ಸೇರಬೇಕೆಂದಿರುವೆನು.ನಾನು ಸಂತಾನ ಹೀನನಾಗಿರುವುದರಿಂದ ಈ ತುಳುರಾಜ್ಯವನ್ನು ಯೋಗ್ಯನಾದ ಒಬ್ಬ ರಾಜನಿಗೆ ಕೊಡಬೇಕೆಂದಿರುವೆನು. ಮಹಾ ಮುನಿಶ್ರೇಷ್ಠರೆ ನನ್ನ ರಾಜ್ಯವನ್ನು ಬಂಗ ರಾಜನಿಗೆ ಉಚಿತವಾಗಿ ದಾನ ಮಾಡಿಕೊಟ್ಟು, ಮುಂದೆ ಭಗವಂತನ ಆರಾಧನೆಯಲ್ಲಿ ಕಾಲವನ್ನು ಕಳೆಯಬೇಕೆಂದಿರುವೆನು. ಈ ಕಾರ್ಯವು ಸುಗಮವಾಗಿ ನೆರವೇರುವಂತೆ ಅನುಗ್ರಹಿಸಬೇಕಾಗಿ ವಿನೀತ ಭಾವದಿಂದ ಬೇಡಿಕೊಂಡನು. ಅರಸನಾದ ವೀರಬಾಹುವಿನ ಕೋರಿಕೆಗೆ ಮೆಚ್ಚಿನ ಸೂಚಿಸುತ್ತಾ, ಭಾರದ್ವಜ ಮುನಿಗಳು ಸಂತುಷ್ಟರಾಗಿ ಹಾಗೆಯೇ ಆಗಲೆಂದು ಹರಸಿದರು. ವೀರ ಬಾಹುರಾಜನು ತನ್ನ ರಾಜ್ಯವನ್ನು ಬಂಗರಾಜನಿಗೆ ಒಪ್ಪಿಸಿ ತಾನು ಪತ್ನಿ ಸಮೇತನಾಗಿ ವಾನ ಪ್ರಸ್ಥಕ್ಕೆ ಹೊರಟ್ಟು, ಹೋದ ನಂತರ ಬಂಗರಾಜನು ಈ ತುಳು ನಾಡನ್ನು ಅತ್ಯಂತ ವೈಭವದಿಂದ

ಆಳತೊಡಗಿದ. ಒಮ್ಮೆ ಬಂಗರಾಜನು ತನ್ನ ಅರಮನೆಯ ಹಂಸತೂಲಿಕಾತಲ್ಪದಲ್ಲಿ ಮಲಗಿರಲು, ಬೆಳಗಿನ ಜಾವದಲ್ಲಿ ಶ್ರೀ ಮಂಗಳಾದೇವಿಯು ಸ್ವಪ್ನದಲ್ಲಿ ದರ್ಶನವನ್ನಿತ್ತು ರಾಜ ನಿನ್ನನ್ನು ಅನುಗ್ರಹಿಸಲಿಕ್ಕಾಗಿ ಪ್ರಸನ್ನಳಾಗಿರುವೆನು ನಾನು ಮಂಗಳಾದೇವಿ, ನೇತ್ರಾವತಿ ಮತ್ತು ಪಾಲ್ಗುಣಿ ನದಿಗಳು ಸಂಗಮವಾಗಿ ಸಮುದ್ರ ಸೇರುವ ಸನಿಹದಲ್ಲಿ ನನ್ನ ಲಿಂಗ ರೂಪದ ಬಿಂಬದಲ್ಲಿ ಚೈತನ್ಯವನ್ನು ಹೊಂದಿರುವೆನು. ಇದೀಗ ನನ್ನ ಆಲಯವು ಕುಸಿದು ಬಿದ್ದು ಒಂದು ದಿಣ್ಣೆಯಂತೆ ಕಾಣುತ್ತದೆ. ನೀನು ಆ ದಿಣ್ಣೆಯನ್ನು ಸರಿಸಿದಾಗ ನನ್ನ ಬಿಂಬ ನಿನಗೆ ಕಾಣಸಿಗುವುದು, ನೀನು ಅದೇ ಸ್ಥಳದಲ್ಲಿ ನನಗೊಂದು ಆಲಯವನ್ನು ನಿರ್ಮಿಸಿ ಬಿಂಬರೂಪದ ಲಿಂಗವನ್ನು ಪುನರ ಪ್ರತಿಷ್ಠಾಪಿಸು ಮತ್ತು ನನಗೆ ಧಾರಾಪಾತ್ರೆಯನ್ನಿಟ್ಟು ಹಾಗೆಯೇ ನನ್ನನ್ನು ಆರಾಧಿಸುತ್ತಿರು ನಿನಗೆ ಮಂಗಳವಾಗಲಿ ಈ ಪುಣ್ಯ ಕಾರ್ಯದಿಂದ ನೀನು ಲೋಕೋತ್ತರವಾದ ಕೀರ್ತಿಯನ್ನು ಪಡೆಯುವಿ, ಎಂದು ಹರಸಿ ಮಾಯವಾಗುವಳು. ನಿದ್ರೆಯಿಂದ ಎಚ್ಚೆತ್ತ ಬಂಗ ರಾಜನು ಕನಸಿನಲ್ಲಿ ಕಂಡ ದೇವಿಯನ್ನೇ ಧ್ಯಾನಿಸುತ್ತ ಬೆಳಗಿನ ಜಾವ ಕಳೆದ ನಂತರ ತನ್ನ ಪರಿವಾರದವರನ್ನು ಕರೆದು ಕನಸಿನಲ್ಲಿ ಕಂಡ ವಿಷಯ ತಿಳಿಸಿ ಅವರನ್ನೆಲ್ಲಾ ಕೂಡಿಕೊಂಡು ಭಾರದ್ವಾಜ ಮುನಿಗಳ ಆಶ್ರಮಕ್ಕೆ ಹೋಗಿ, ಮುನಿಗಳಿಗೆ ವಂದಿಸಿ, ತನಗೆ ಕನಸಿನಲ್ಲಿ ಶ್ರೀ ಮಂಗಳಾದೇವಿ ಬಂದು ಆಕೆಯ ಆಜ್ಞೆಯನ್ನು ತಿಳಿಸುವನು. ಸಂತೋಷಗೊಂಡ ಭಾರದ್ವಾಜಮುನಿಗಳು ಆತನೊಂದಿಗೆ ಆ ದಿವ್ಯ ಸಾನಿಧ್ಯಕ್ಕೆ ತೆರಳುವರು ಬಂಗರಾಜನು ಭಾರದ್ವಾಜ ಮುನಿಗಳಿಗೆ ನಮಿಸುತ್ತಾ ಪೂಜ್ಯ ಮುನಿವರ್ಯ ನಿಮ್ಮ ಅನುಗ್ರಹದಿಂದ ಶ್ರೀ ಮಂಗಳಾದೇವಿಯ ಬಿಂಬದ ಪುನರ್ ಪ್ರತಿಷ್ಠಾಪನೆಯು ನೆರವೇರಿತು. ಸ್ವಾಮಿ ಈ ಬಿಂಬಕ್ಕೆ ಧಾರಾಪಾತ್ರೆಯಾಕಾಗಿ ಬಂತು, ದಯವಿಟ್ಟು ಶ್ರೀ ಮಂಗಳೆಯ ಈ ಕ್ಷೇತ್ರದ ಮಹಿಮೆಯನ್ನು ತಿಳಿಸಬೇಕೆಂದು ಪ್ರಾರ್ಥಿಸಿದನು. ಭಾರದ್ವಾಜರು ಶ್ರೀ ಹರಿಯು ವರಾಹ ಮತ್ತು ನರಸಿಂಹ ಅವತಾರದ ಕತೆಯನ್ನು ಹೇಳಿ, ವರಹಾ ಅವತಾರವೆತ್ತಿ ವಧಿಸಿದ ಹಿರಣ್ಯಾಕ್ಷನ ಮಗಳಾದ ವಿಖಾಸಿನಿಯು ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ವರಪಡೆದುದನ್ನು ವಿವರಿಸಿ ಆಕೆಗೆ ಶಿವನಿಂದ ಪಡೆದ ಮಗನಿಂದಾಗಿ ದೇವತೆಗಳೆಲ್ಲರೂ ಸ್ವರ್ಗ ಬಿಡಬೇಕಾಗಿ ಬಂದುದನ್ನೂ ಹೇಳಿ ಆ ದುಷ್ಟದಾನವನನ್ನು ವಧಿಸುವರೇ ತ್ರಿಲೋಕ ಪೂಜ್ಯಳಾದ ಮಹಾದೇವಿಯನ್ನು ಬ್ರಹ್ಮವಿಷ್ಣು ಶಿವರೊಂದಿಗೆ ದೇವತೆಗಳು ಒಂದಾಗಿ ಪ್ರಾರ್ಥಿಸಿದಾಗ ಶ್ರೀ ಮಂಗಳಾದೇವಿಯು ಪ್ರತ್ಯಕ್ಷಳಾಗಿ ದೇವತೆಗಳಿಗೆ ಅಭಯ ನೀಡಿ ಈ ದಾನವನ್ನು ವಧಿಸುವ ಕತೆಯನ್ನು ಹೇಳುವರು. ಭಾರದ್ವಾಜರು ಮುಂದುವರಿದು ರಾಜ ನಮ್ಮ ಆಶ್ರಮದ ಸನೀಹದಲ್ಲೇ ಭಾರ್ಗವ ರಾಮನು ತಪವನ್ನಾಚರಿಸಿ ಶಿವ ಶಕ್ತಿಯನ್ನು ಒಲಿಸಿಕೊಂಡಿದ್ದ. ಆಗ ಶ್ರಿ ಮಂಗಳಾದೇವಿಯು ಪರಶುರಾಮನೊಂದಿಗೆ ನನ್ನ ಲಿಂಗ ರೂಪದ ಬಿಂಬವು ನಿನಗೆ ಕಾಣಸಿಗುವುದು ಅದಕ್ಕೊಂದು ಆಲಯವನ್ನು ನಿರ್ಮಿಸಿ ಅದರಲ್ಲಿ ಪ್ರತಿಷ್ಠಾಪಿಸು ಈ ಬಿಂಬದಲ್ಲಿ ಶಿವನ ಶಕ್ತಿಯೂ ನನ್ನೊಂದಿಗಿರುವುದರಿಂದ ಧಾರಾ ಪಾತ್ರೆ ಇದೆ. ಅನಂತರ ಶಿಥಿಲಗೊಂಡ ಈ ಸ್ಥಳವನ್ನು ಮಹಿಮಾ ಪುರುಷರಾದ ಮಚ್ಛೇಂದ್ರನಾಥರ ಆದೇಶದಂತೆ ತುಳುನಾಡಿನ ದೊರೆಯಾದ ಕುಂದವರ್ಮನು ಮಂದಿರವನ್ನು ನಿರ್ಮಿಸಿ ಶ್ರೀ ಮಂಗಳಾದೇವಿಯನ್ನು ಪುನರ್ ಪ್ರತಿಷ್ಠಾಪಿಸಿದ. ಶ್ರೀ ಮಂಗಳಾದೇವಿ ಇಲ್ಲಿ ನೆಲೆಸಿರುವುದರಿಂದಲೇ ಇಲ್ಲಿಗೆ ಮಂಗಳಾಪುರ ಎಂಬ ಹೆಸರು ಬಂದಿದೆ. ಶ್ರೀ ಮಂಗಳಾದೇವಿಯನ್ನು ಅನುದಿನವೂ ಆರಾಧಿಸಿಕೊಂಡು ಬಂದಲ್ಲಿ ಸಕಲ ಸೌಭಾಗ್ಯವನ್ನು ಕರುಣಿಸುವಳು ಮೋಕ್ಷವು ಪ್ರಾಪ್ತಿಯಾಗುವುದು. ಇಲ್ಲಿಂದ ಇನ್ನೊಂದು ವೈಶಿಷ್ಟವೆಂದರೆ ಯಾವ ಕುಮಾರಿಗೆ ಕಂಕಣ ಬಲ ಕೂಡಿ ಬರುವುದಿಲ್ಲವೋ ಆಕೆ ಶುದ್ಧದಲ್ಲಿದ್ದು ದೇವಿಯ ಸನಿಹದಲ್ಲಿ "ಸ್ವಯಂವರ ಪಾರ್ವತಿ" ವ್ರತವನ್ನಾಚರಿಸಿದರೆ ಆಕೆಗೆ ಯೋಗ್ಯ ವರನು ದೊರೆತು ಅವರ ಸಂಸಾರವು ಸುಖಕರವಾಗಿ ಪರಿಣಮಿಸುವುದು, ಯಾರು ಈ ದೇವಿಯ ಸನ್ನಿಧಿಯಲ್ಲಿ ವಿವಾಹ ಆಗುವರೋ ಅವರು ಕೂಡಾ ತಮ್ಮ ಜೀವನುದದ್ದಕ್ಕೂ ಸುಖ ಸಂಪತ್ತನ್ನು ಹೊಂದಿ ಸಂತೃಪ್ತ ಜೀವನ ನಡೆಯಿಸುವರು. ಈ ದೇವಿಯನ್ನು ಶ್ರದ್ಧಾಭಕ್ತಿಯಿಂದ ಆರಾಧಿಸುತ್ತಿದ್ದರೆ, ಆತನಿಗೆ ಬಂದಿರುವ ಕಷ್ಟ ಕಾರ್ಪಣ್ಯಗಳು ಮಂಜಿನಂತೆ ಕರಗಿ ಹೋಗುವುದು. ಆದುದರಿಂದ ನೀನು ಶ್ರೀ ಮಂಗಳಾದೇವಿಯನ್ನು ತ್ರಿಕರ್ಣ ಪೂರಕ ಆರಾಧಿಸಿದರೆ ನಿನಗೆ ಸಕಲ ಸೌಭಾಗ್ಯ ಲಭಿಸುವುದು ನಿನ್ನ ಕೀರ್ತಿ ಶಾಶ್ವತವಾಗಿ ಉಳಿಯುವುದು ಎಂಬುದಾಗಿ ಹೇಳಿ ಹರಸುವರು.

*****

## 4. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆ. (https://itms.kar.nic.in/ರಲ್ಲಿ ಲಭ್ಯವಿರುವಂತೆ)

**ಶಾಸನ ಶೀರ್ಷಿಕೆ / ಉಲ್ಲೇಖ ಸಂಖ್ಯೆ** - ಪಂಡರಿದೇವ ಒಡೆಯರ ಬರಹ
**ಸ್ಕ್ರಿಪ್ಟ್ ವಿಧ** - ಕನ್ನಡ
**ಸೆಂಚುರಿ** - ತಿಳಿದಿಲ್ಲ
**ಶಾಸನ ವಿವರಗಳು** - ಇದು ಶಕ1404 ಪ್ಲವ, ಮಾಘ ಸು.15 ಆದಿತ್ಯವಾರ, ಕ್ರಿ.ಶ. 1482 ಫೆಬ್ರವರಿ 3 ಭಾನುವಾರಕ್ಕೆ ಅನುಗುಣವಾಗಿ, ವಿದ್ಯಾನಗರಿಯಿಂದ ವಿರೂಪಾಕ್ಷರಾಯನ ಆಳ್ವಿಕೆಯಲ್ಲಿ ಸಾವಂತ ಬಂಕಿ ಅರಸ ಮತ್ತು ಹೊನ್ನ ಕಂಬಳಿಯು ಮೂಕಾಂಬಿಕಾ ದೇವಿಗೆ ಅರ್ಪಿಸಲು ಮಾಡಿದ ಭೂಮಿಯನ್ನು ಉಡುಗೊರೆಯಾಗಿ ದಾಖಲಿಸಿದೆ. ಕೊಲ್ಲೂರಿನಲ್ಲಿ ಪಂಡರಿದೇವನು ಮಹಾಪ್ರದಾನ ಸಿಂಗನ-ದಣ್ಣಾಯಕರ ಆದೇಶದಂತೆ ಬಾರಕೂರು-ರಾಜ್ಯವನ್ನು ಆಳುತ್ತಿದ್ದನು. ದೇವಾಲಯದ ಸ್ಥಾನಕರ್ತ ಸಿಂಗ-ಒಡೆಯನು ತನ್ನ ತಪಸ್ವಿ ಗುಣಗಳಿಗಾಗಿ ಪ್ರಶಂಸಿಸಲ್ಪಟ್ಟಿದ್ದಾನೆ.

**ರಚನೆ ಹೆಸರು** - ಕಲ್ಲಿನ
**ಸೆಂಚುರಿ** - 15ನೇ - 16ನೇ ಶತಮಾನ
**ರಚನೆ ವಿವರಗಳು** - 15 - 16 ನೇ ಶತಮಾನದಲ್ಲಿ ಕೆಳದಿ ರಾಜರು 1 ನೇ ಪ್ರಾಕಾರವನು ನಿರ್ಮಿಸಿದರು.

ಸ್ಥಳ ಪುರಾಣ



ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿರುವ ಕೊಲ್ಲೂರು ಶ್ರೀ ಕ್ಷೇತ್ರ ಪರಶುರಾಮನ ಸೃಷ್ಟಿಯಲ್ಲಿ ಮೋಕ್ಷದ ಏಳು ನಿವಾಸ(ಕ್ಷೇತ್ರ)ಗಳಲ್ಲಿ ಒಂದು. ಶ್ರೀ ಕ್ಷೇತ್ರವನ್ನು ಆದಿ ಶಂಕರಾಚಾರ್ಯರು ಸ್ಥಾಪಿಸಿದ್ದಾರೆ. ಇದು ಶಕ್ತಿ ದೇವಿಯನ್ನು ಪೂಜಿಸುವ ವಾಸಸ್ಥಾನವಾಗಿದೆ. ದೇವಿ ಮೂಕಾಂಭಿಕೆಯನ್ನು ಇಲ್ಲಿ ಶಕ್ತಿ ದೇವತೆಯಾಗಿ ಪೂಜಿಸಲಾಗುತ್ತದೆ. ಮೂಕ ಎಂದು ಕರೆಯಲ್ಪಡುವ ದೈತ್ಯಾಕಾರದ ಅಥವಾ "ರಾಕ್ಷಸನಾದ ಕೌಮಾಸುರನನ್ನು ಈ ಕ್ಷೇತ್ರದಲ್ಲಿ (ಹನನ) ಸಂಹಾರ/ಕೊಲ್ಲಲಾಯಿತು" ಮೂಕಾಂಬಿಕೆಯು ಆದಿ ಶಕ್ತಿಯಾಗಿದ್ದು, ಲಿಂಗವು ಅದರ ಎಡಭಾಗದಲ್ಲಿ ಮಹಾಕಾಳಿ, ಮಹಾಲಕ್ಷ್ಮೀ ಮತ್ತು ಮಹಾ ಸರಸ್ವತಿ ಅನ್ನು ಸಂಯೋಜಿಸಿದೆ. ಈ ರೂಪದಲ್ಲಿರುವ ಆದಿಶಕ್ತಿಯನ್ನು ಇಲ್ಲಿ ಮಾತ್ರ ಕಾಣಬಹುದು. ಉದ್ಭವಲಿಂಗದ ರೂಪದಲ್ಲಿ, ಮೂಕಾಂಬಿಕೆಯು ಬಲಭಾಗದಲ್ಲಿ ಬ್ರಹ್ಮ, ವಿಷ್ಣು ಮತ್ತು ಶಿವನನ್ನು ಸಂಯೋಜಿಸಿದ್ದಾಳೆ. ಚಿನ್ನದ ಸರಪಳಿಯು ಈ ಜ್ಯೋತಿರ್ಲಿಂಗವನ್ನು ಎಡ ಮತ್ತು ಬಲ ಭಾಗಗಳಾಗಿ ವಿಭಜಿಸುತ್ತಿದೆ. ಲಿಂಗದ ಎಡಭಾಗವು ಶಕ್ತಿಯನ್ನು ಪ್ರತಿನಿಧಿಸುತ್ತದೆ ಮತ್ತು ಬಲಭಾಗವು ಶಿವನನ್ನು ಪ್ರತಿನಿಧಿಸುತ್ತದೆ. ಅವರ

ಧ್ಯಾನದ ಸಮಯದಲ್ಲಿ ದೇವಿಯು ಅವರ ದೇವದರ್ಶನದಲ್ಲಿ ಕಾಣಿಸಿಕೊಂಡಿದ್ದರಿಂದ, ಆದಿ ಶಂಕರರು ಶ್ರೀಚಕ್ರ ಯಂತ್ರ ದಲ್ಲಿ ದೇವಿಯ ಪ್ರತಿಮೆಯನ್ನು ಸ್ಥಾಪಿಸಿದರು. ಶ್ರೀ ಶಂಕರಾಚಾರ್ಯರ ಪೀಠವು ದೇವಾಲಯದ ಸಕ್ಯಮ್ ಗರ್ಭಗುಡಿಯ ಪಶ್ಚಿಮ ಭಾಗದಲ್ಲಿದೆ. ಇಂದಿಗೂ ಆದಿ ಶಂಕರಾಚಾರ್ಯರು ರೂಪಿಸಿದ ವಿಜಯಾಗಮ ಪದ್ಧತಿಯಂತೆ ಪೂಜಾ ವಿಧಿವಿಧಾನಗಳನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಪ್ರತಿದಿನ ಬೆಳಿಗ್ಗೆ 5.00 ಗಂಟೆಗೆ ನಿರ್ಮಾಲ್ಯ ಪೂಜೆ ನಡೆಯುತ್ತದೆ ಮತ್ತು ಆ ಸಮಯದಲ್ಲಿ ಭಕ್ತರಿಗೆ ಸ್ವಯಂಭೂ ಲಿಂಗವನ್ನು ದರ್ಶನ ಮಾಡಲು/ನೋಡಲು ಅವಕಾಶವಿದೆ. ದೇವಸ್ಥಾನದಲ್ಲಿ ಪ್ರತಿದಿನ ತ್ರಿಕಾಲ ಪೂಜೆ ನಡೆಯುತ್ತದೆ. ಸಾವಿರಾರು ಭಕ್ತರು ತಮ್ಮ ಸಮಸ್ಯೆಗಳು, ನೋವುಗಳು ಮತ್ತು ಕಷ್ಟಗಳಿಂದ ಸಾಂತ್ವನ ಪಡೆಯಲು ಅಥವಾ ತಮ್ಮ ಧಾರ್ಮಿಕ ಪ್ರತಿಜ್ಞೆಗಳನ್ನು ಅರ್ಪಿಸಲು ಅಥವಾ ಪರಿಸರದ ನೈಸರ್ಗಿಕ ದೃಶ್ಯ ಸೌಂದರ್ಯವನ್ನು ಆನಂದಿಸಲು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಪ್ರತಿ ಮಂಗಳವಾರ, ಶುಕ್ರವಾರ ಮತ್ತು ಶ್ರಾವಣ ಮಾಸದಲ್ಲಿ ಅಥವಾ ಫಾಲ್ಗುಣ ಮಾಸದ ಮೂಲಾ ನಕ್ಷತ್ರದಂದು ವಿವಿಧ ರಾಜ್ಯಗಳಿಂದ ಸಾವಿರಾರು ಭಕ್ತರು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ . ಮೂಕಾಂಬಿಕೆಯ ನೆಲೆಯಾಗಿರುವ ಕೊಲ್ಲೂರು ಪ್ರಮುಖ ಯಾತ್ರಾ ಕೇಂದ್ರಗಳಲ್ಲಿ ಒಂದು ಎಂದು ಡಿ. ಎಲ್ಲ ವೈಲ್ಡ್ ಬರೆದಿದ್ದಾರೆ. ಈ ಸ್ಥಳವು ಅತ್ಯಂತ ಪವಿತ್ರವಾಗಿದೆ ಮತ್ತು ರಾಷ್ಟ್ರದ ಒಳಗಿನ ಮತ್ತು ಹೊರಗಿನ ಭಕ್ತರು ತೀರ್ಥಯಾತ್ರೆಯಲ್ಲಿ ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ ಮತ್ತು ತಪಸ್ಸು ಮತ್ತು ಇತರ ಧಾರ್ಮಿಕ ಪೂಜೆಗಳನ್ನು ಮಾಡುತ್ತಾರೆ ಮತ್ತು ಸಂರಕ್ಷಿತ ಭಾವನೆಗಳೊಂದಿಗೆ ಹಿಂತಿರುಗುತ್ತಾರೆ. ಈ ದೇವಾಲಯಕ್ಕೆ ಭೇಟಿ ನೀಡುವ ಭಕ್ತರಲ್ಲಿ ದೇಶದ ನಾನಾ ರಾಜ್ಯಗಳಿಂದ ಭಕ್ತರು ಶ್ರೀಯವರ ದರ್ಶನಕ್ಕೆ ಆಗಮಿಸುತ್ತಾರೆ. ಅದರಲ್ಲಿ ಕೇರಳದವರು ಹೆಚ್ಚು. ದೇವಾಲಯವು ಪ್ರಮುಖ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಅನೇಕ ಪ್ರೌಢಶಾಲೆಗಳು ಮತ್ತು ಪ್ರಿ-ಯೂನಿವರ್ಸಿಟಿ ಕಾಲೇಜುಗಳು ಕೊಲ್ಲೂರಿನ ಸುತ್ತಮುತ್ತಲಿನ ದೇವಾಲಯದಿಂದ ನಿರ್ವಹಿಸಲ್ಪಡುತ್ತವೆ. ದೇವಾಲಯಕ್ಕೆ ಭೇಟಿ ನೀಡುವ ಭಕ್ತರ ಅನುಕೂಲಕ್ಕಾಗಿ ಮತ್ತು ಸೌಕರ್ಯಗಳಿಗಾಗಿ ಉತ್ತಮ ವಸತಿಗೃಹಗಳು ಮತ್ತು ಉದ್ಯಾನವನಗಳನ್ನು ಸ್ಥಾಪಿಸಲಾಗಿದೆ.

**ದೇವಾಲಯ ವಿಶೇಷ - ಐತಿಹಾಸಿಕ**

**ವಿಶೇಷ ವಿವರಣೆ** - ಆದಿ ಶಂಕರರು ಏಳನೇ ಶತಮಾನದಲ್ಲಿ ಲೋಕಸಂಚಾರ ಕೈಗೊಳ್ಳುವ ಸಮಯದಲ್ಲಿ ಕೊಡಚಾದ್ರಿ ಮಾರ್ಗದಲ್ಲಿ ಸಂಚರಿಸುವಾಗ ಸ್ವಯಂಭೂ ಲಿಂಗಕ್ಕೆ ಆಕರ್ಷಿತರಾಗಿ ಧ್ಯಾನಾಸಕ್ತರಾದಾಗ ಕಂಡ ಮೂಕಾಂಬಿಕೆಯ ರೂಪವನ್ನು ಶ್ರೀ ಚಕ್ರ ಪೀಠದ ಮೇಲೆ ಶ್ರೀ ಮೂಕಾಂಬಿಕೆಯನ್ನು ಪ್ರತಿಷ್ಠಾಪಿಸಿರುತ್ತಾರೆ.

*****

ಚಾಮರಾಜಪೇಟೆ, ಬೆಂಗಳೂರು - 18

ಅನುಬಂಧ - 2 (2114)

**ಮಾನ್ಯ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (2114) 223* ರ ಉಪಪ್ರಶ್ನೆ (ಆ) ಉತ್ತರಕ್ಕೆ ಸಂಬಂಧಿಸಿದಂತೆ**

**ಅನುಬಂಧ-2**

**ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ.**

| ವರ್ಷ | ಆದಾಯ (ರೂ.ಗಳಲ್ಲಿ) | ವೆಚ್ಚ (ರೂ.ಗಳಲ್ಲಿ) | ಠೇವಣಿ ಮೊತ್ತ (ರೂ.ಗಳಲ್ಲಿ) | ಸಾಮಾನ್ಯ ಸಂಗ್ರಹಣಾ ನಿಧಿ ವಂತಿಗೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| **2022-23** | 1,23,64,49,480.47 | 63,77,41,589.55 | | 3,44,17,150.00 |
| **2023-24** | 1,46,01,52,759.50 | 70,36,74,393.42 | 6,07,50,12,940.00 | 4,93,99,953.00 |
| **2024-25** | 1,55,95,19,567.08 | 79,82,73,197.06 | | ಜಮ ಮಾಡಲು ಕ್ರಮವಹಿಸಲಾಗುತ್ತಿದೆ. |

**ಕದ್ರಿ ಶ್ರೀ ಮಂಜುನಾಥ ದೇವಾಲಯ**

| ವರ್ಷ | ಆದಾಯ (ರೂ.ಗಳಲ್ಲಿ) | ವೆಚ್ಚ (ರೂ.ಗಳಲ್ಲಿ) | ಠೇವಣಿ ಮೊತ್ತ (ರೂ.ಗಳಲ್ಲಿ) | ಸಾಮಾನ್ಯ ಸಂಗ್ರಹಣಾ ನಿಧಿ ವಂತಿಗೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| **2022-23** | 6,07,84,813.00 | 5,75,55,969.89 | | 3,22,884.00 |
| **2023-24** | 7,59,57,307.68 | 6,55,39,329.08 | 2,12,48,095.00 | 10,41,797.86 |
| **2024-25** | 8,04,07,769.50 | 8,10,99,050.41 | | 69,128.00 |

**ಬೋಳಾರ, ಮಹತೋಭಾರ ಶ್ರೀ ಮಂಗಳಾದೇವಿ**

| ವರ್ಷ | ಆದಾಯ (ರೂ.ಗಳಲ್ಲಿ) | ವೆಚ್ಚ (ರೂ.ಗಳಲ್ಲಿ) | ಠೇವಣಿ ಮೊತ್ತ (ರೂ.ಗಳಲ್ಲಿ) | ಸಾಮಾನ್ಯ ಸಂಗ್ರಹಣಾ ನಿಧಿ ವಂತಿಗೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| **2022-23** | 3,71,77,957.06 | 3,66,89,021.00 | | 48,892.00 |
| **2023-24** | 3,90,77,375.80 | 3,76,96,224.39 | 2,42,13,764.00 | 1,38,115.00 |
| **2024-25** | 4,23,55,888.22 | 4,60,18,365.85 | | ಆದಾಯಕಿಂತ ವೆಚ್ಚವು ಹೆಚ್ಚಾಗಿರುತ್ತದೆ. |

**ಶ್ರೀ ಮೂಕಾಂಬಿಕಾ ದೇವಾಲಯ, ಕೊಲ್ಲೂರು**

| ವರ್ಷ | ಆದಾಯ (ರೂ.ಗಳಲ್ಲಿ) | ವೆಚ್ಚ (ರೂ.ಗಳಲ್ಲಿ) | ಠೇವಣಿ ಮೊತ್ತ (ರೂ.ಗಳಲ್ಲಿ) | ಸಾಮಾನ್ಯ ಸಂಗ್ರಹಣಾ ನಿಧಿ ವಂತಿಗೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| 2022-23 | 59,47,55,646 | 33,32,62,211 | | 2,61,49,343.00 |
| 2023-24 | 68,23,06,285 | 41,63,93,569 | 2,00,83,64,755 | 2,65,91,272.00 |
| 2024-25 | 71,93,37,865 | 40,58,19,653 | | 3,13,51,821.00 |

ಆಯುಕ್ತರ ಪರವಾಗಿ,
ಧಾರ್ಮಿಕ ದತ್ತಿ ಇಲಾಖೆ,
ಬೆಂಗಳೂರು.